ಇಳಿದು ಹೋಗುವ ಸವಾಲೇ ಇರಲಿಲ್ಲ. ಹಾಗಾಗಿಯೇ ಮಾನಸರೋವರ(ವೆಸ್ಟ್) ಎಂಬುದು ಅಸ್ತಿತ್ವದಲ್ಲಿಲ್ಲ. ಒಂದು ಕಾಲದಲ್ಲಿ ಖಾಡಿಯ ವಿಸ್ತರಣೆಯಾಗಿದ್ದ ಪೂರ್ವದ ತಗ್ಗು ಪ್ರದೇಶಗಳನ್ನು ಸಿಡ್ಕೋದವರು ಮಣ್ಣಿನಿಂದ ಭರಣ ಮಾಡಿ ನಿವೇಶನಗಳನ್ನಾಗಿಸಿ ಬಿಲ್ಡರುಗಳಿಗೆ ಹಂಚಿದ್ದಾರೆ. ಬಿಲ್ಡರುಗಳು ಭವ್ಯ ಇಮಾರತುಗಳನ್ನೆಬ್ಬಿಸಿ 1 ಬಿಎಚ್‌ಕೆ 2 ಬಿಎಚ್‌ಕೆಗಳ ಚೌಕಗಳಲ್ಲಿ ಆಕಾಶವನ್ನೇ ಸಿಗಿದು ಮಾರಿದ್ದಾರೆ. ಸಂಜೆಯಾಗುತ್ತಿದ್ದಂತೆ ದಿನದ ಗಡಿಬಿಡಿಯಿಂದ ಬಿಡುಗಡೆಗೊಂಡ ಜನರು ಮಾನಸ ಸ್ಟೇಶನ್ನಿನಲ್ಲಿ ಇಳಿಯುತ್ತಿದ್ದಂತೆಯೇ ನಾಲ್ಕು ಗೋಡೆಗಳ ನಡುವಿನ ನೆಮ್ಮದಿಯ ಹಸಿವಿನಲ್ಲಿ ಏಕಮುಖ ಧಾವಂತದಲ್ಲಿರುತ್ತಾರೆ. ಶಾಂತಾರಾಮ ಮಾತ್ರ ವಿರುದ್ಧವಾಗಿ ನಡೆದು ಹಳಿ ದಾಟಿ ಆಚೆಯ ನಿರುಪಯೋಗಿ ಪ್ಲಾಟ್‌ಫಾರ್ಮಿನ ಅರೆಗತ್ತಲಲ್ಲಿರುವ ಬೆಂಚಿನ ಮೇಲೆ ಬಂದು ಕೂರುವನು. ಅದು ಅವನ ದಿನಚರಿಯ ಭಾಗವೇ ಆಗಿದೆ. ಸೂರ್ಯಾಸ್ತದ ನಂತರ ಆವರಿಸುವ ಕತ್ತಲಲ್ಲಿ ಕರಗಿಕೊಳ್ಳುವ ಎದುರಿನ ಕಾಂಡ್ಲಾವನ, ಬಲದಿಕ್ಕಿಗಿರುವ ದೂರದ ಗುಡ್ಡಸಾಲುಗಳು ಮತ್ತು ಉಳಿದ ಹಿಡಿಬೆಳಕಲ್ಲಿ ಬೆಳ್ಳಿ ಚಾಪೆಯಂತೆ ಕಾಣುವ ಕಿರುತೊರೆ, ಒಂದೊಂದಾಗಿ ಕಾಣುವ ಮಿನುಗುವ ತಾರೆಗಳು ಎಲ್ಲವೂ ಶಾಂತಾರಾಮನ ಉಪಸ್ಥಿತಿಗೆ ಸಾಕ್ಷಿಯಾಗುವವು; ಅದೇ ಬೆಂಚಿನ ಮೇಲೆ ಶಾಂತಾರಾಮನನ್ನು ಅಪ್ಪಿ ಕೂರುತ್ತಿದ್ದ ಕುಸುಮಳ ಈಗಿನ ಅನುಪಸ್ಥಿತಿಗೂ!

ಇಂಥ ಒಂದು ಅನಾಮಿಕ ಸ್ಥಳದಲ್ಲಿ ಶಾಂತಾರಾಮ ಮೊಬೈಲ್ ಎತ್ತಿಕೊಂಡು ಸುಮ್ಮನೇ ಕಣ್ಣಾಡಿಸುತ್ತ ಕೂತಿರುವನು. ಯಾವುದೇ ಹೊಸ ಮೆಸೇಜುಗಳು ಇರುವುದಿಲ್ಲ ಎನ್ನುವುದು ಗೊತ್ತಿದ್ದರೂ ಇನ್‌ಬಾಕ್ಸಲ್ಲಿ ಕುಸುಮಳ ಹಳೆಯ ಮೆಸೇಜುಗಳನ್ನು ಸವರುತ್ತಿರುವುದು ಆದತ್ ಆಗಿದೆ ಅವನಿಗೆ. ಮುಂಜಾವಿಗೆ, ಮುಸ್ಸಂಜೆಗೆ, ಮಳೆಹನಿಗೆ, ತಂಗಾಳಿಗೆ, ಬೇಸರಕೆ, ಹರುಶಕೆ. ಹಾಸ್ಯಕೆ ತಾನು ಬರೆದ ಎಲ್ಲ ಸಂದೇಶಗಳೂ ಕುಸುಮಳ ಪ್ರತಿಸ್ಪಂದನಗಳೂ ಅವನ ಬೆರಳ ಸ್ಪರ್ಶಕ್ಕೆ ಗರಿ ಮೂಡಿದಂತೆ ಸರಿದಾಡುತ್ತವೆ. ಆ ಕ್ಷಣಕ್ಕೆ ಸಣ್ಣ ನಶೆಯೊಂದು ಆವರಿಸಿಕೊಂಡು ಅವನನ್ನು ಹಗುರ ಮಾಡುತ್ತವೆ. ಎಲ್ಲ ಸಂದೇಶಗಳೂ ಮರುಸ್ಪರ್ಶಕ್ಕೆ ಈಗಲೂ ಭಾವತರಂಗಗಳನ್ನೆಬ್ಬಿಸುವಷ್ಟು ಫ್ರೆಶ್ ಆಗಿವೆ. ಇವೆಲ್ಲವೂ ಸಂಬಂಧವೊಂದು ಹೊಸೆದುಕೊಂಡದ್ದಕ್ಕೆ ಸಾಕ್ಷಿಯಾಗಿವೆಯಾದರೂ ನಂತರದ ವಿದಾಯವನ್ನು ತಾರ್ಕಿಕವಾಗಿ ಸಮರ್ಥಿಸಿಕೊಳ್ಳಬಲ್ಲ ಒಂದೇ ಒಂದು ಸಂದೇಶವೂ ಅವನ ಬೆರಳುಗಳಿಗೆ ನಿಲುಕುವುದಿಲ್ಲ!

ತನ್ನ ಕವಿತೆಯನ್ನು ಓದಿ ಎಲ್ಲಿಂದಲೋ ನಂಬರು ಪಡೆದು ಕಳುಹಿಸಿದ ಮೆಚ್ಚುಗೆಯ ಮೊದಲ ಸಂದೇಶ ಇನ್ನೂ ಹಾಗೇ ಇದೆ! ಕತೆಯೊಂದನ್ನು ಓದಿ ಇಷ್ಟವಾದರೂ ಅದರ ಅಂತ್ಯದ ಬಗ್ಗೆ ತಕರಾರು ತೆಗೆದ ಸಂದೇಶವೂ ಇದೆ. ಓದಿದ ಪ್ರತಿ ಕತೆ ಕವನಗಳಿಗೆ ಸ್ಪಂದಿಸುವ ಅವಳ ಸಂದೇಶಗಳನ್ನು ಅಳಿಸುವ ಮನಸಾಗುತ್ತಿರಲಿಲ್ಲ ಶಾಂತಾರಾಮನಿಗೆ. ಕತೆ ಬರಲು ತಡವಾದರೆ "ನಮ್ಮ ಪಕ್ಕದ ಊರಿನ ಲೇಖಕರು ಹೇಗಿದ್ದಾರೆ?" ಎಂದು ತಾನಾಗೇ ಮಾತಾಡಿಸುತ್ತಿದ್ದಳು. "ಅಕ್ಕರೆ ತೋರುವ ಓದುಗರಿದ್ದರೆ ಲೇಖಕರು ಸುಖಿತ್ತಾಗಿರುತ್ತಾರೆ" ಎನ್ನುತ್ತ ಇವನು ಮಾತು ಮುಂದುವರಿಸುತ್ತಿದ್ದ. ಸಂದೇಶಗಳು ಕತೆ ಕವನಗಳ ಚೌಕಟ್ಟಿನಿಂದ ಹೊರಬಂದು ಪರಸ್ಪರ ಪರಿಚಯದಲ್ಲಿ ಸುತ್ತಿದ್ದವು; ಅಘನಾಶಿನಿ ತೀರದವನಾದ ಶಾಂತಾರಾಮ ಮತ್ತು ಶಿರಸಿಯ ದಟ್ಟ ಕಾಡಿನ ಊರಿನವಳಾದ ಕುಸುಮಳಲ್ಲಿ ಸಾಹಿತ್ಯಿಕ ಪರಿಚಯವು ಸಂಬಂಧವೊಂದನ್ನು ಚಿಗುರಿಸಿತ್ತು! ಉದ್ಯೋಗ ನಿಮಿತ್ತ ಊರುಗಳನ್ನು ಬಿಟ್ಟು ಪ್ರಸ್ತುತ ಅಕ್ಕಪಕ್ಕದ ಉಪನಗರಗಳಲ್ಲಿ ವಾಸಿಸುತ್ತಿರುವ ಆಕಸ್ಮಿಕವೊಂದು ಅವರನ್ನು ಆಪ್ತ ತೀರಕ್ಕೂ ತಂದು ನಿಲ್ಲಿಸಿತ್ತು. ಮುಂಜಾನೆಯ